ಕೊಟ್ಟಿದ್ದಳು. ಕಡೆಗದು ತಂಗ್ಯನ ಕೈಗೆ ಬಂದಿತ್ತು. ಹುಡುಗಿ ಮೈಕೈ ತುಂಬಿಕೊಂಡಿದ್ದರಿಂದ ತಂಗ್ಯನಿಗೆ ಮೆಚ್ಚುಗೆಯಾಗಿದ್ದಳು. ತಂದಿದ್ದ ಒಂದು ಡಜನ್ ಬಾಳೆಹಣ್ಣು ಹಾಗೂ ಮೂರು ಕುಚ್ಚು ಹೂವನ್ನು ತಟ್ಟೆಯಲ್ಲಿ ಇಟ್ಟು ಮುದ್ದನುಮಕ್ಕನ ಕೈಗೆ ಅಂದಿಸುತ್ತಾ ಹೆಣ್ಣಿನ ಚಿಕ್ಕಮ್ಮ, "ನಿಮ್ಮನೆ ನಮಗೆ ಒಪ್ಪಿಗೆ ಆಗೈತೆ. ಚಿಕ್ಕ ಸಂಸಾರ, ನಮ್ಮುಡ್ಗಿ ನೆಮ್ಮದಿಯಾಗಿ ಇರ್ತಾಳೆ ಅನ್ನೊ ನಂಬಿಕೆ ನಮ್ಗೆನೊ ಐತೆ ಆದ್ರೆ..." ಎಂದು ಮಾತು ನಿಲ್ಲಿಸಿ ದೊಡ್ಡಯ್ಯನ ಕಡೆ ನೋಡಿದ್ದಳು. "ಅದೇನೋ ಹೇಳ್ರಿ ಪರ್ವಾಗಿಲ್ಲ. ಋಣಾನುಬಂಧ ಇದ್ರೆ ಆಗ್ತೈತೆ. ಇಲ್ಲದಿದ್ರೆ ನಿಮ್ಮುಡ್ಗಿ ನಿಮ್ಮನೆಲಿರ್ತಾಳೆ, ನಮ್ಮುಡ್ಗ ನಮ್ಮನೆಲಿರ್ತಾನೆ." ಎಂದು ಮುದ್ದನುಮಕ್ಕ ಮುಖದ ಮೇಲೆಯೇ ಹೇಳಿದ್ದಳು. ಮುದ್ದನುಮಕ್ಕ ಬಲು ಗಟ್ಟಿ ಹೆಂಗಸು. ಒಂದೆಕರೆ ನೀರಾವರಿ, ಎರಡೆಕರೆ ದಿನ್ನೆ ಹೊಲದಲ್ಲಿ ಗಂಡಸಿನಂತೆ ಲೀಲಾಜಾಲವಾಗಿ ಮೂವತ್ತು ವರ್ಷ ಬೇಸಾಯ ಮಾಡಿಕೊಂಡು ಬಂದಿದ್ದಳು. ಮುದ್ದನುಮಕ್ಕನ ಕೈಯಲ್ಲಿ ಯಾವ ಬೀಜವೂ ಕೆಡುತ್ತಿರಲಿಲ್ಲ. ಊರಿನೋರೆಲ್ಲ ಬಿತ್ತನೆ ಟೈಮಿನಲ್ಲಿ ಹುರುಳಿ, ಹೆಸರು, ಅಲಸಂದೆ, ಹುಚ್ಚೆಳ್ಳು, ಹರಳು ಮುಂತಾದ ಬಿತ್ತನೆ ಬೀಜಗಳಿಗೆ ಮುದ್ದನುಮಕ್ಕನ ಮನೆಯನ್ನು ಎಡತಾಕುತ್ತಿದ್ದರು. ಅಂಥ ಕೈಗುಣ ಮುದ್ದನುಮಕ್ಕನದು. ಮುದ್ದನುಮಕ್ಕನ ಮಾತುಗಳಿಗೆ ಹೆಣ್ಣಿನ ಚಿಕ್ಕಮ್ಮ, "ನಮ್ಮುಡ್ಗಿ ನಿಮ್ಮುಡ್ಗನಿಗಿಂತ ವಯಸ್ಸಲ್ಲಿ ಎಂಟು ತಿಂಗಳು ದೊಡ್ಡೋಳು. ನಿಮ್ಮುಡ್ಗನ್ ಡೇಟ್ ಆಫ್ ಬರ್ತ್ ಇಲ್ಲಿಗೆ ಬಂದ್ಮೇಲೆ ತಿಳೀತು." ಎಂದು ಮಾತುಗಳಲ್ಲಿ ವಿನಯ ತುಂಬಿಕೊಂಡು ಹೇಳಿದ್ದಳು. ಕುಂಟ್ಯಾಕಲ್ ದೊಡ್ಡಯ್ಯ, "ಅಷ್ಟೇನಾ, ಅದೇನ್ ದೊಡ್ ವಿಷ್ಯ ಅಂತ ಹೇಳ್ತೀಯ ಬಿಡಮ್ಮಯ್ಯ. ಪ್ರೈಮರಿ ಸ್ಕೂಲ್ನಾಗೆ ಸೇರಿಸ್ಕೊಳ್ಳೊವಾಗ ಮೇಷ್ಟ್ರು ಎರ್ಡ್ ಮೂರು ವರ್ಷ ಹೆಚ್ಚು ಕಮ್ಮಿ ಬರ್ದಿರ್ತಾರೆ. ಅಂಥ ಎಷ್ಟು ಮದುವೆಗಳಾಗಿಲ್ಲ. ಅಂಥೋರ್ಗೆಲ್ಲಾ ಡಜನ್‌ಗಟ್ಲೆ ಮಕ್ಳಾಗಿಲ್ವಾ. ಅದೆಂತೋನೊ ತೆಂಡೂಲ್ಕರ್ ಅಂತೆ, ಕ್ರಿಕೆಟ್ ಪ್ಲೇಯರ್ರು, ಅವನೆಂಡ್ತಿ ಅವನ್ಗಿಂತ್ಲೂ ಆರೊರ್ಷ ದೊಡ್ಡೋಳಂತೆ. ತನಗಿಂತ್ಲೂ ದೊಡ್ಡೋಳ್ನ ಮದ್ವೆ ಮಾಡ್ಕಂಡು ಅವ್ನದೃಷ್ಟ ಯಂಗೆ ಮೇಲೆರೋಯ್ತು ನೋಡ್ರಿ. ಹಂಗೆ ಹಿಂದಿ ಸಿನಿಮಾ ಆಕ್ಟ್ರೆಸ್ ಐಶ್ವರ್ಯ ರೈ ಕೂಡಾ ಗಂಡನಿಗಿಂತ ಆರೊರ್ಷ ದೊಡ್ಡೋಳಂತೆ. ಈ ಕಾಲ್ದಾಗೆ ಅವುಕ್ಕೆಲ್ಲ ಏನ್ ಲೆಕ್ಕ ಬಿಡ್ರಮ್ಮ. ನೀನೇಳ್ತೀಯ ರಂಗಸ್ವಾಮಿ, ನಿನ್ನಭಿಪ್ರಾಯ ಏನ್ ಮುದ್ದನುಮಕ್ಕ. ನಿನ್ನಾಕ್ಷೇಪ್ಣೆ ಏನಾದ್ರೂ ಐತೆನೊ ಮಂಜಣ್ಣ." ಎಂದು ಎಲ್ಲರನ್ನು ಒಟ್ಟಿಗೆ ಕೂಡಿಸಿ ಕೇಳಿದ್ದ ದೊಡ್ಡಯ್ಯ. ದೊಡ್ಡಯ್ಯ ತನ್ನ ಸರ್ವೀಸಿನಲ್ಲಿ ಒಂದಿನ್ನೂರು ಇನ್ನೂರೈವತ್ತು ಮದುವೆಗಳನ್ನಾದರೂ ಸೆಟ್ ಮಾಡಿಸಿದ್ದಾನೆ. ಹಾಗಾಗಿ ಜನರಲ್ ನಾಲೆಡ್ಜ್ ಸಿಕ್ಕಾಪಟ್ಟೆ ತುಂಬಿಕೊಂಡಿದೆ. "ಅಣ್ಣಯ್ಯ ಈ ವಾರದಲ್ಲಿ ಫೋನ್ ಮಾಡಿಸ್ತೀವಿ ಹೋಗ್ರಿ ಮಾತಾಡ್ಕಂಡು ನಮ್ಮ ದೊಡ್ಡಯ್ಯಣ್ಣನ್ನಾತ್ವ." ಎಂದು ಮುದ್ದನುಮಕ್ಕ ಹೆಣ್ಣಿನ ಕಡೆಯವರನ್ನು ಸಾಗಾಕಿದ್ದಳು.

ಹೆಣ್ಣಿನ ಕಡೆಯವರು ಬಂದು ಹೋದ ಒಂದೆರಡು ಮೂರು ದಿನ ಮುದ್ದನುಮಕ್ಕ ಊರಿನಲ್ಲಿ ತಮ್ಮ ನೆಂಟರಿಷ್ಟರನ್ನು, ಕೆಲವು ಹಿರಿ ತಲೆ ಹೆಂಗಸರನ್ನು ಹುಡುಗಿ ವಯಸ್ಸಿನ ಬಗ್ಗೆ ಕೇಳಿ ಕಂಗಾಣಿಸಿದ್ದಳು. "ಅಯ್ಯೋ ಒಳ್ಳೇದೆ ಆಯ್ತು ತಕೊ ಮುದ್ದನುಮಕ್ಕ. ಹೆಣ್ಣಿನ ವಯಸ್ಸು ತುಂಬಾ ಕಮ್ಮಿ ಇದ್ರೆ ಅದೇನೋ ಹೇಳ್ತೀವಲ್ಲ ಅಮ್ನೋರು ಪಟ್ಟಕ್ಕೆ ಬಂದಾಗ ಅಯ್ನೋರು ಚಟ್ಟ ಏರಿದ್ರು ಅಂತ. ಹಂಗಾಗ್ತೈತೆ." ಎಂದಿದ್ದರು. ಅದೇ ಟೈಮಿಗೆ ಬುಡುಬುಡುಕೆ ರಾಮಯ್ಯನೂ ಊರಿಗೆ ಬಂದು ಇಳಿದಿದ್ದ. ಬುಡುಬುಡುಕೆ ಅಲ್ಲಾಡಿಸಿಕೊಂಡು ಮನೆ ಹತ್ತಿರ ರಾಮಯ್ಯನು ಬಂದಾಗ ತಂಗ್ಯನು ನಡುಮನೆಯಲ್ಲಿ ಗಂಗಾಳದಲ್ಲಿ ತಂಗಳು ಅನ್ನಕ್ಕೆ ಮೊಸರು ಹಾಕಿಕೊಂಡು, ಅದಕ್ಕೊಂದು ಉಪ್ಪು, ಈರುಳ್ಳಿ ಹಸಿಮೆಣಸಿನಕಾಯಿ ಹಿಂಚುಕಿಕೊಂಡು ತುತ್ತನ್ನು ತೂಗಿ ತೂಗಿ ಬಾಯಿಗೆಸೆದುಕೊಳ್ಳುತ್ತಿದ್ದ. ಮುದ್ದನುಮಕ್ಕ ರಾಮಣ್ಣನ ಜೋಳಿಗೆಗೆ ಅರ್ಧ ಮೊರ ರಾಗಿ ಹಾಕಿ, ಎಲೆ ಅಡಿಕೆಯಲ್ಲಿ ಇಪ್ಪತ್ತೊಂದು ರೂಪಾಯಿ ಇಟ್ಟು ಹುಡುಗ ಹುಡುಗಿಯ ಹೆಸರು ಬಲ ಕೇಳಿದ್ದಳು. ರಾಮಯ್ಯ ಒಂದೆರಡು ನಿಮಿಷ